ಇದನ್ನು ಮಾಡಬೇಕಾದರೆ, ೯ ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವುದು, ಕೊಲ್ಲೂರು ಹೊಳೆಗೆ ಒಂದು ಸೇತುವೆ ನಿರ್ಮಿಸುವುದು ಹಾಗೂ ೩.೧೦ ಕಿ.ಮೀ. ಉದ್ದಕ್ಕೆ ರಸ್ತೆಯನ್ನು ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ಹೆದ್ದಾರಿ ರಸ್ತೆಗೆ ಸೇರುವಂತೆ ಮಾಡುವುದು, ಇತ್ಯಾದಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

ಈ ರಸ್ತೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಗೊಳಪಡುತ್ತವೆ. ಮೇಲ್ಕಂಡ ಸೇತುವೆಯನ್ನು ಕಟ್ಟುವುದಕ್ಕೂ ಹಾಗೂ ಪೂರಕ ಕಾಮಗಾರಿಗಳನ್ನು ಮಾಡುವುದಕ್ಕೂ ಸುಮಾರು ೧೨೫ ಲಕ್ಷ ರೂ.ಗಳ ಅಂದಾಜು ಬರುತ್ತದೆ. ವಿವರ ಈ ಕೆಳಕಂಡಂತಿದೆ.

ಅ) ಸೇತುವೆ ನಿರ್ಮಾಣಕ್ಕೆ (೧೮೦ ಮೀ. ಉದ್ದ ೭.೫ ಮೀ. ಅಗಲ)	೭೫.೦೦ ಲಕ್ಷ ರೂ.
ಆ) ಸೇತುವೆಯ ಎರಡು ಬದಿ ಕೂಡು ರಸ್ತೆ	೭೫.೦೦ ಲಕ್ಷ ರೂ.
ಇ) ಕೊಲ್ಲೂರು ಹೊಳೆಯಿಂದ ರಾಷ್ಟ್ರೀಯ ರಸ್ತೆ ಸೇರುವ ರಸ್ತೆ ನಿರ್ಮಾಣ	೫.೦೦ ಲಕ್ಷ ರೂ.
ಈ) ನಾವುಂದ-ಬಡಾಕೆರೆ ರಸ್ತೆ ಅಭಿವೃದ್ಧಿ	೧೫.೦೦ ಲಕ್ಷ ರೂ.
ಉ) ಭೂ ಸ್ವಾಧೀನ ಇತ್ಯಾದಿ	೫.೦೦ ಲಕ್ಷ ರೂ.
	೧೨೫.೦೦ ಲಕ್ಷ ರೂ.

ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಈ ಕಾಮಗಾರಿಗಳಿಗೆ ಇಷ್ಟು ಅನುದಾನ ಕೊಡುವ ಸಂದರ್ಭವು ಬಹಳ ಕಡಿಮೆ ಇರುವುದರಿಂದ, ಕೇಂದ್ರ ರಸ್ತೆ ಫಂಡಿನಲ್ಲಿ (ಸಿ.ಆರ್.ಎಫ್) ಈ ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಈ ಬಗ್ಗೆ ವಿವರವಾದ ಅಂದಾಜು ಪಟ್ಟಿಯನ್ನು ತಯಾರು ಮಾಡುವಂತೆ ಮುಖ್ಯ ಇಂಜಿನಿಯರ್, ದಕ್ಷಿಣ ವಲಯದವರಿಗೆ ಈಗಾಗಲೇ ಸೂಚನೆಗಳನ್ನು ಸರ್ಕಾರದಿಂದ ನೀಡಲಾಗಿದೆ.

ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕು ಎನ್.ಹೆಚ್, 4ನಲ್ಲಿ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎನ್ನುವವರು ಲಾರಿ ಹರಿದು ಮೃತಪಟ್ಟಿರುವುದು

ಶ್ರೀ ಟಿ. ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರೇ, ದಿನಾಂಕ ೧೬-೬-೯೦ರಂದು ಶಿರಾ ತಾಲ್ಲೂಕಿನ ಎನ್‌ಹೆಚ್-೪ನಲ್ಲಿರುವ ದ್ವಾರಾಳು ಊರಿನ ಹತ್ತಿರ ಶ್ರೀ ಚಂದ್ರಹಾಸ ಎಂಬುವವರು ೩೦ ವರ್ಷ ವಯಸ್ಸಾಗಿದ್ದ ಸೈಕಲ್ ಹಿಡಿದು ನಿಂತಿದ್ದು ಸರಿಯಷ್ಟೆ. ಸಾಯಂಕಾಲ ೭ ಗಂಟೆ ಸಮಯದಲ್ಲಿ ದಾರಿಯಲ್ಲಿ ಲಾರಿಯೊಂದು ಚಂದ್ರಹಾಸನ ಮೇಲೆ ಹರಿದು ಚಂದ್ರಹಾಸನು ಸ್ಥಳದಲ್ಲಿಯೇ ಮೃತ ಪಟ್ಟಿದ್ದಾನೆ, ಮತ್ತು ಇಲ್ಲಿಯವರೆಗೂ ಲಾರಿ ಪತ್ತೆಯಾಗಿಲ್ಲ ಮತ್ತು ಲಾರಿಯನ್ನು ಹಿಡಿದಿರುವುದಿಲ್ಲ. ತಾವರೆಕೆರೆ ಪೋಲೀಸರು ಗಮನ ಹರಿಸುತ್ತಿಲ್ಲ. ಆದುದರಿಂದ ಸರಕಾರ ಕೂಡಲೇ ಕ್ರಮ ತೆಗೆದುಕೊಂಡು ಸದರಿ ಲಾರಿಯನ್ನು ಪತ್ತೆ ಹಚ್ಚಬೇಕೆಂದು ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಮತ್ತು ಸದರಿ ಸತ್ತ ವ್ಯಕ್ತಿಯ ಹೆಂಡತಿಯು ಸಧ್ಯ ಗರ್ಭಿಣಿಯಾಗಿದ್ದು ಅಲ್ಲದೆ ಇವರಿಗೆ ಇಪ್ಪರೂ ಮಕ್ಕಳು ಇರುತ್ತವೆ, ಇವರು ಬಹಳ ಬಡ ಕುಟುಂಬದವರಾಗಿದ್ದು ಇವರಿಗೆ ಸರಕಾರದ ವತಿಯಿಂದ ಸೂಕ್ತ ಪರಿಹಾರ ಒದಗಿಸಿಕೊಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಈ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

೧೦) ಹುಬ್ಬಳ್ಳಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲಿಗೆ ಸೇರಬಯಸುವ ವಿದ್ಯಾರ್ಥಿಗಳಿಂದ ವಂತಿಗೆ ತೆಗೆದುಕೊಳ್ಳದಿರುವಂತೆ ಒತ್ತಾಯ

ಶ್ರೀ ಪಿ. ಸಿ. ಸಿದ್ದನಗೌಡರ್.—ಹುಬ್ಬಳ್ಳಿ ನಗರದಲ್ಲಿ ನಗರಸಭೆಯವರು ನಡೆಸುತ್ತಿರುವ ಲ್ಯಾಮಿಂಗ್‌ಟನ್ ಹೈಸ್ಕೂಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲು ವಂತಿಗೆಯನ್ನು ಪಡೆಯುವರು ಎಂದು ತಿಳಿದು ಬಂದಿದೆ. ಹುಬ್ಬಳ್ಳಿ ನಗರಸಭೆಯ ಸದಸ್ಯರು ಈ ವಿಚಾರದಲ್ಲಿ ಧರಣಿ ಮಾಡಿದ್ದು ಪತ್ರಿಕೆಯಲ್ಲಿ ಬಂದಿದೆ. ಆದಕಾರಣ ತಕ್ಷಣ ವಂತಿಗೆ ನಿಲ್ಲಿಸಿ ಸಂಬಂಧಪಟ್ಟವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಶಾಸಕರ ವಿಚಾರವನ್ನು ಪರಿಗಣಿಸಿ ಅದಕ್ಕೆ ಸೂಕ್ತ ಕಾರ್ಯ ಕ್ರಮವನ್ನು ಕೈಗೊಳ್ಳಲಾಗುವುದು.

ಅಧ್ಯಕ್ಷರು.—ಈಗ ಸಭೆಯು ಮುಂದುವರೆದು ಮತ್ತೆ ಮಧ್ಯಾಹ್ನ ೨-೧೦ಕ್ಕೆ ಸಮಾವೇಶ ಗೊಳ್ಳುವುದು.

ಸದನವು ೧-೧೦ಕ್ಕೆ ಮುಕ್ತಾಯವಾಯಿತು.

ಸದನವು ಪುನ: ೨ ಗಂಟೆ ೨೦ ನಿಮಿಷಕ್ಕೆ ಸಮಾವೇಶಕೊಂಡಿತು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ವಿತ್ತೀಯ ಕಾರ್ಯಕಲಾಪಗಳು

೧) ೧೯೯೦-೯೧ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

ಅಭಿಯಾಚನೆ ಕ್ರಮಾಂಕ ೩೧—ವೈದ್ಯಕೀಯ, ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಜನಾರೋಗ್ಯ ಖಾತೆಗಳ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿಯವರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ದಿನಾಂಕ ೩೧-೩-೧೯೯೧ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೬೦,೫೦,೬೪,೦೨೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬,೦೦,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ನಾನು ಭಿನ್ನವಿಸಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಬೇಡಿಕೆಯನ್ನು ಮಂಡಿಸಲಾಯಿತು. ಈಗ ಬೇಡಿಕೆ ಮೇಲಿನ ಚರ್ಚೆಯನ್ನು ಮಾನ್ಯ ಸಿಂಧ್ಯಾರವರು ಪ್ರಾರಂಭಿಸಬಹುದು.

† ಶ್ರೀ ಪಿ ಜಿ.ಆರ್. ಸಿಂಧ್ಯ (ಕನಕಪುರ) —ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ರಾಜ್ಯದ ಆರೋಗ್ಯ ಸಚಿವರು ಈ ವರ್ಷ ಆರೋಗ್ಯ ಇಲಾಖೆಗೆ ವಿಚ್ರ್ಯು ಮಾಡತಕ್ಕಂಥ ಹಣಕ್ಕೆ ನಮ್ಮ ಒಪ್ಪಿಗೆಯನ್ನು ಕೇಳಲಿಕ್ಕೆ ಬೇಡಿಕೆಗಳನ್ನು ಮಂಡಿಸಿದ್ದಾರೆ. ಈ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ಮುಂಚೆ ನಮ್ಮ ಆರೋಗ್ಯ ಸಚಿವರಿಗೆ ಈ ಇಲಾಖೆಯನ್ನು ಆರೋಗ್ಯವಾಗಿ ಇಡಬೇಕು ಎನ್ನುವ ಆಸೆಯಂತೂ ಬಹಳ ಇದೆ. ಅವರು ಮಂತ್ರಿಯಾಗುತ್ತಾ ಇರುವುದು ಇದು ಮೂರನೇ ಸಾರಿ. ಅವರಿಗೆ ನಾವೆಲ್ಲರಿಗೆ ಸಹ ಯಶಸ್ಸನ್ನು ಕೋರುತ್ತೇವೆ. ಅವರು ಈ ಇಲಾಖೆಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕು. ಜೊತೆಗೆ ರಾಜ್ಯದ ಜನತೆಯ ಆರೋಗ್ಯವನ್ನು ಸುಧಾರಣೆ ಮಾಡಲಿಕ್ಕೆ ಎಲ್ಲ ಪ್ರಯತ್ನವನ್ನು ಮಾಡುತ್ತಾರೆಂದು ನಾವು ತಿಳಿದಿದ್ದೇವೆ. ಈ ಒಂದು ಆರೋಗ್ಯ ಇಲಾಖೆಯು ಮುಖ್ಯವಾದ ವ್ಯಕ್ತಿಗಳಲ್ಲಿ ಒಬ್ಬರಾಗಿರತಕ್ಕಂಥಾವರು ವೈದ್ಯರು. ಈ ವೈದ್ಯರುಗಳಿಗೆ ಇರತಕ್ಕಂಥ ಒಂದು ಮುಖ್ಯವಾದ ಗುಣ ನಮ್ಮ ಆರೋಗ್ಯ ಮಂತ್ರಿಗಳಲ್ಲಿದ್ದೆ, ರೋಗಿಯನ್ನು ನೋಡುವುದಕ್ಕೆ ಮುಂಚೆ ವೈದರು ಸ್ವಲ್ಪ ನಕ್ಕೆ ಚೆನ್ನಾಗಿ ಮಾತನಾಡಿಸಿದರೆ ಅರ್ಧ ಖಾಯಿಲೆ ಹೋದಹಾಗೆ ಆಗುತ್ತದೆ. ಆ ಗುಣ ನಮ್ಮ ಆರೋಗ್ಯ ಮಂತ್ರಿಗಳಲ್ಲಿದೆ. ನಗುತ್ತಾ, ನಗುತ್ತಾ ಎಲ್ಲರನ್ನೂ ಬಹಳ ಚೆನ್ನಾಗಿ ಮಾತನಾಡಿಸುತ್ತಾರೆ.

ಶ್ರೀ ಹೆಚ್. ವಿಶ್ವಾನಾಥಯ್ಯ.—ನಿಮಗೆ ರೋಗ ಹೋಗಿದೆಯೇ.

ಶ್ರೀ ಪಿ. ಜಿ. ಆರ್. ಸಿಂಧ್ಯ....ನನಗೆ ಏನೂ ರೋಗ ಇಲ್ಲ. ನಾನು ೧೫-೧೬ ತಿಂಗಳು ಆರೋಗ್ಯ ಮಂತ್ರಿಯಾಗಿದ್ದೆ. ಅದು ಏನು ಕಾರಣವೋ ಗೊತ್ತಿಲ್ಲ. ಆಂತೂ ಯಾವಾಗಲೂ ಸಹಿತ ಆರೋಗ್ಯ ಮಂತ್ರಿಗಳು ಅನಾರೋಗ್ಯದಿಂದ ಇರುತ್ತಾರೆ. ಆ ಪೋರ್ಟ್‌ಫೋಲಿಯೊ ಬಿಟ್ಟಮೇಲೆ ನಾನು ಆರೋಗ್ಯವಾಗಿದ್ದೆ. ಆ ಪೋರ್ಟ್‌ಫೋಲಿಯೊ ಇದ್ದಂಥ ಸಂದರ್ಭದಲ್ಲಿ ಒಂದಲ್ಲ ಒಂದು ರೋಗ ಇದ್ದೇ ಇರುತ್ತಿತ್ತು. ಆದ್ದರಿಂದ ಅವರಿಗೆ ಹಾಗೇ ಆಗದೇ ಇರಲಿ ಎಂದು ನಾನು ಆಸೆಯನ್ನು ವ್ಯಕ್ತ ಪಡಿಸುತ್ತೇನೆ.

ಉಪಾಧ್ಯಕ್ಷರು,—ಅವರಿಗೆ ಆ ಸಮಸ್ಯೆ ಇಲ್ಲ ಎಂದು ಕಾಣುತ್ತದೆ.